## ಬೆಳದಿಂಗಳ ಸಂಗೀತ 210

21 ಮಾರ್ಚ್ 2019

ಗಾಯನ
ವಿದ್ವಾನ್ ವಿವೇಕ್ ಮೂಜಿಕುಲಂ

ವಯೊಲಿನ್
ವಿದ್ವಾನ್ ವಿ.ಎಸ್. ಗೋಕುಲ್

ಮೃದಂಗ
ವಿದ್ವಾನ್ ಬಿ.ಸಿ. ಮಂಜುನಾಥ್

### ಶ್ರೀ ಸುತ್ತೂರು ಮಠ, ಮೈಸೂರು ಶಾಖೆ

ಚಾಮುಂಡಿಬೆಟ್ಟದ ತಪ್ಪಲು, ಮೈಸೂರು

# ಬೆಳದಿಂಗಳ ಸಂಗೀತ 209

19 ಫೆಬ್ರವರಿ 2019 * ಮಂಗಳವಾರ * ಸಂಜೆ 6.00

ದಿವ್ಯ ಸಾನ್ನಿಧ್ಯ
ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು
ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ



ಗಾಯನ
ಪಂ. ನಾಗರಾಜರಾವ್ ಹವಾಲ್ದಾರ್



ಸಹಗಾಯನ
ಪಂ. ಓಂಕಾರ್‌ನಾಥ್ ಹವಾಲ್ದಾರ್



ಹಾರ್ಮೋನಿಯಂ
ಪಂ. ಸಮೀರ್ ಹವಾಲ್ದಾರ್



ತಬಲ
ಪಂ. ಕೇದಾರ್‌ನಾಥ್ ಹವಾಲ್ದಾರ್

---

**ಪಂ. ನಾಗರಾಜರಾವ್ ಹವಾಲ್ದಾರ್** ಕರ್ನಾಟಕದ ಹಿಂದೂಸ್ತಾನಿ ಸಂಗೀತಗಾರರಲ್ಲಿ ಅಗ್ರಪಂಕ್ತಿಯಲ್ಲಿ ನಿಲ್ಲುವವರು. ಇವರು ಪಂ. ಮಾಧವ ಗುಡಿಯವರ ಬಳಿ ಕಿರಾನಾ ಘರಾಣೆಯಲ್ಲಿ ಸಂಗೀತವನ್ನು, ಪಂ. ಪಂಚಾಕ್ಷರಿಸ್ವಾಮಿ ಮತ್ತಿಗಟ್ಟಿಯವರಲ್ಲಿ ಜೈಪುರ್–ಅತ್ರೋಲಿ ಘರಾಣೆಯ ವೈಶಿಷ್ಟ್ಯಗಳನ್ನು ಕಲಿತಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯದ ಎಂ.ಎ., "ಸಂಗೀತರತ್ನ" ಮತ್ತು ಪಿಎಚ್.ಡಿ. ಪದವೀಧರರು. ಹುಬ್ಬಳ್ಳಿಯ ಸಂಗೀತ ಭಂಡಾರದಲ್ಲಿ ಮತ್ತು ಬೆಂಗಳೂರು ಆಕಾಶವಾಣಿಯಲ್ಲಿ ಕಾರ್ಯಕ್ರಮ ನಿರ್ವಾಹಕರಾಗಿ ಸೇವೆ ಸಲ್ಲಿಸಿದ್ದಾರೆ. "ಬದಲಾಗುತ್ತಿರುವ ಕಾಲಘಟ್ಟದಲ್ಲಿ ಶಾಸ್ತ್ರೀಯ ಸಂಗೀತ" ಮೊದಲಾದ ಮೂರು ಗ್ರಂಥಗಳನ್ನು ರಚಿಸಿದ್ದಾರೆ. ಭಾರತದ ಬಹುತೇಕ ಸಂಗೀತ ಸಮಾರೋಹಗಳಲ್ಲಿ ಮತ್ತು ಹಲವಾರು ವಿದೇಶಿ ವಿಶ್ವವಿದ್ಯಾನಿಲಯಗಳಲ್ಲಿ ಸಂಗೀತ ಕಚೇರಿಗಳು ಮತ್ತು ಪ್ರಾತ್ಯಕ್ಷಿಕೆಗಳನ್ನು ನೀಡಿದ್ದಾರೆ. ಷಿಕಾಗೊ ನಗರದ ಎಲ್ಮ್‌ಹರ್ಸ್ಟ್ ಕಾಲೇಜಿನಲ್ಲಿ ಹಿಂದೂಸ್ತಾನಿ ಸಂಗೀತದ ಸಂದರ್ಶಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಬೆಂಗಳೂರಿನ ಸುನಾದ ಆರ್ಟ್ ಫೌಂಡೇಷನ್ ಸಂಸ್ಥೆಯ ಸ್ಥಾಪಕ–ಅಧ್ಯಕ್ಷರಾಗಿ ಮುನ್ನಡೆಸುತ್ತಿದ್ದಾರೆ.

**ಪಂ. ಓಂಕಾರ್‌ನಾಥ್ ಹವಾಲ್ದಾರ್** ತಂದೆ ಡಾ. ನಾಗರಾಜರಾವ್ ಹವಾಲ್ದಾರ್‌ರವರಲ್ಲಿ ಸಂಗೀತ ಶಿಕ್ಷಣ ಪಡೆದಿದ್ದಾರೆ. ಪಂ. ರಾಜಗೋಪಾಲ್ ಕಲ್ಲೂರ್‌ಕರ್, ಪಂ. ಎಂ. ನಾಗೇಶ್ ಮತ್ತು ಪ್ರಸ್ತುತ ಪಂ. ಸಮೀರ್ ಚಟರ್ಜಿಯವರಲ್ಲಿ ತಬಲಾ ವಾದನ ಕಲಿಯುತ್ತಿದ್ದಾರೆ. ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದಿಂದ ಎಂ, ಮ್ಯೂಸಿಕ್ ಪದವಿ ಪಡೆದಿದ್ದಾರೆ.

**ಪಂ. ಸಮೀರ್ ಹವಾಲ್ದಾರ್** ಕೂಡ ಇದೇ ಸಂಗೀತ ಕುಟುಂಬದಲ್ಲಿ ಅರಳಿರುವ ಮತ್ತೊಂದು ಪ್ರತಿಭೆ. ಸೋದರಬಂಧು ಗಳಾದ ಶ್ರೀ ಓಂಕಾರನಾಥ್ ಮತ್ತು ಕೇದಾರನಾಥ್‌ರವರ ಜೊತೆ ಸಂಗೀತ ಸಾಧನೆ ಮಾಡಿದ್ದಾರೆ. ದೇಶಾದ್ಯಂತ ಹಲವಾರು ಸಂಗೀತೋತ್ಸವಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ಉತ್ತಮ ಹಾರ್ಮೋನಿಯಂ ವಾದಕರಾಗಿ ಹಲವಾರು ದಿಗ್ಗಜರ ಸಂಗೀತಕ್ಕೆ ಸಾಥ್ ನೀಡಿದ್ದಾರೆ.

**ಪಂ. ಕೇದಾರ್‌ನಾಥ್ ಹವಾಲ್ದಾರ್** ತಂದೆ ಪಂ. ನಾಗರಾಜ ಹವಾಲ್ದಾರ್‌ರವರಿಂದ ಸಂಗೀತದ ಪ್ರಾಥಮಿಕ ಪಾಠಗಳನ್ನು ಕಲಿತರು. ಫರೂಖಾಬಾದ್ ಘರಾಣೆಯ ಪಂ. ರಾಜಗೋಪಾಲ್ ಕಲ್ಲೂರ್‌ಕರ್‌ರವರಲ್ಲಿ, ಅನಂತರ ಪಂ. ಎಂ. ನಾಗೇಶ್‌ರವರಲ್ಲಿ ತಬಲಾ ವಾದನದ ಕ್ರಮಬದ್ಧ ಶಿಕ್ಷಣ ಪಡೆದರು.

ಫೋನ್: 0821–2548220, 2548221 * ಫ್ಯಾಕ್ಸ್: 0821–2548219 * ಇಮೇಲ್: jssashram@yahoo.com